ಕೊಂಡಾಡುತ್ತಾ, ಅವರಿಬ್ಬರೂ ನಮ್ಮ ಹಳ್ಳಿಯ ರಾಮ ಲಕ್ಷ್ಮಣರಿದ್ದಂತೆ ಎಂದು ಹೊಗಳಿದರು. ಈಗ ತಮ್ಮ ಮಗ ಚಿನ್ನಪ್ಪನು ಪಂಚಾಯಿತಿ ಚುನಾವಣೆಗೆ ನಿಲ್ಲಬೇಕೆಂದಿದ್ದಾನೆ. ಗೆದ್ದು ತನ್ನಂತೆ ಅವನೂ ಊರಿನ ಸೇವೆಯನ್ನು ಮಾಡ ಬೇಕೆಂದಿದ್ದಾನೆ. ಆದರೆ ಬಾಬಣ್ಣ ಏನಾದರೂ ಚುನಾವಣೆಗೆ ನಿಂತರೆ ತಮ್ಮ ಮಗ ಖಂಡಿತಾ ಗೆಲ್ಲಲಾರ. ಹಾಗಾಗಿ ಬಾಬಣ್ಣನು ಚುನಾವಣೆಯಿಂದ ಹಿಂದೆ ಸರಿದರೆ ಚಿನ್ನಪ್ಪನಿಗೆ ಉಪಕಾರವಾಗುತ್ತದೆ. ಸುಮ್ಮನೆ ಅಣ್ಣತಮ್ಮಂದಿರ ನಡುವೆ ಕಲಹವೇಕೆ? ಎಂದು ಸುಬ್ಬಮ್ಮಳನ ಎದುರು ಬೇಡಿಕೊಂಡರು.

ರಾಮೇಗೌಡರು ತನ್ನೆದುರಿಗೆ ಹೀಗೆ ಕೈಮುಗಿದು ಕಣ್ಣೀರು ಹಾಕುವುದು ಸುಬ್ಬಮ್ಮನಿಗೆ ಪಿಚ್ಚೆನಿಸಿತು. ಎಷ್ಟಾದರೂ ಅವರ ಮನೆಯ ಅನ್ನವನ್ನು ತಿಂದಿದ್ದೇವೆ ಎಂದುಕೊಂಡು ಸುಬ್ಬಮ್ಮ ಮಗನಿಗೆ ಚುನಾವಣೆಯಿಂದ ಹಿಂದೆ ಸರಿಯಲು ಸೂಚಿಸಿದಳು. ಆದರೂ ಇರುವ ಒಬ್ಬ ಮಗನಿಗೆ ಬೇರೆ ಏನೂ ಕೆಲಸವಿಲ್ಲ, ಉಳುಮೆ ಮಾಡಲು ಹೊಲವೂ ಇಲ್ಲ, ಜೀವನಕ್ಕೆ ಏನು ಮಾಡುವುದು? ಎಂದು ಸುಬ್ಬಮ್ಮನು ವಿನಯದಿಂದ ಕೇಳಿದಳು. ರಾಮೇಗೌಡರು ಸುಬ್ಬಮ್ಮನಿಗೆ ಸಮಾಧಾನ ಮಾಡುತ್ತಾ, ಸೈನ್ಯಕ್ಕೆ ಸೇರಲು ಚಿನ್ನಪ್ಪನು ತಂದಿದ್ದ ಅಪ್ಲಿಕೇಷನ್ ಫಾರಂನ್ನು ಬಾಬಣ್ಣನಿಗೆ ಕೊಡುತ್ತಾ, ಬರುವ ವಾರವೇ ಆರ್ಮಿಗೆ ಸೆಲೆಕ್ಷನ್ ಇದೆಯೆಂದೂ, ತಂದಿರುವ ಅಪ್ಲಿಕೇಷನ್ ಬಾಬಣ್ಣನು ಹಾಕಿದರೆ ಸೈನ್ಯದಲ್ಲಿ ಗ್ಯಾರಂಟಿ ಕೆಲಸ ಸಿಕ್ಕಿ ಒಳ್ಳೆಯ ಸಂಬಳವೂ ಮತ್ತು ದೇಶಸೇವೆ ಮಾಡಿದಂತೆಯೂ ಆಗುತ್ತದೆ ಎಂಬ ರಾಮೇಗೌಡರ ಮಾತಿಗೆ ತಾಯಿ ಮತ್ತು ಮಗ ಕರಗಿದರು. ಅಂತೂ ಚಿನ್ನಪ್ಪನು ಚುನಾವಣೆಗೆ ನಾಮಪತ್ರ ಸಲ್ಲಿಸುವಾಗ ಬಾಬಣ್ಣನು ಜೊತೆಯಲ್ಲಿದ್ದನು. ಆ ಚುನಾವಣೆಯಲ್ಲಿ ಚಿನ್ನಪ್ಪನು ಬಾಬಣ್ಣನ ಬೆಂಬಲದಿಂದ ಪಂಚಾಯಿತಿ ಎಲೆಕ್ಷನ್ನಲ್ಲಿ ಗೆದ್ದು ಚೇರ್ಮನ್ ಕೂಡ ಆದನು. ಸಮಾಧಾನ ಮಾಡಲು ಬಂದಿದ್ದ ರಾಮೇಗೌಡರು ಮತ್ತು ಚಿನ್ನಪ್ಪನ ಮುಖ ಕಂಡ ಕ್ಷಣ ಸುಬ್ಬಮ್ಮನ ಕಣ್ಣೆದುರು ಹಳೆಯ ಘಟನೆಗಳೆಲ್ಲಾ ಮೂಡಿಬಂದವು.

ಕೆಲಸಕ್ಕೆ ಸೇರಿದ ಮೇಲೆ ನಿನ್ನನ್ನು ಕೊನೆಯವರೆಗೆ ಚೆನ್ನಾಗಿ ನೋಡಿಕೊಳ್ಳುತ್ತೇನೆಂದು ಭರವಸೆ ನೀಡಿದ್ದ ಮಗ ಹೀಗೆ ಕೆಲಸಕ್ಕೆ ಸೇರಿದ ಒಂದು ವರ್ಷದಲ್ಲೇ ನಡುನೀರಲ್ಲಿ ತನ್ನನ್ನು ಒಬ್ಬಂಟಿಯಾಗಿ ಬಿಟ್ಟು ಹೋಗುತ್ತಾನೆಂದು ಸುಬ್ಬಮ್ಮ ಎಣಿಸಿರಲಿಲ್ಲ. ಕುಸುಮಾ ಅಂತೂ ಮೊದಲಿನಿಂದ ಬಾಬುವನ್ನು ಮನಸಾರೆ ಪ್ರೀತಿಸಿ, ಅವನನ್ನೇ ಮದುವೆಯಾಗಿ ಜೀವನವನ್ನು ಸಾಗಿಸಬೇಕೆಂದುಕೊಂಡಿದ್ದವಳಿಗೆ ವಿಧಿಯು ಈ ಅನಿರೀಕ್ಷಿತ ಆಘಾತವನ್ನು ತಂದೊಡ್ಡಿತ್ತು. ಗಂಡನನ್ನು ಚಿಕ್ಕ ವಯಸ್ಸಿನಲ್ಲೇ ಕಳೆದುಕೊಂಡಿದ್ದ ಸುಬ್ಬಮ್ಮ ತನ್ನ ಜೀವವನ್ನು ಹಿಡಿದುಕೊಂಡು ಬದುಕಿದ್ದಿದ್ದೇ ತನ್ನ ಮಗನಿಗಾಗಿ, ಅಂತಹ ಇದ್ದ ಒಬ್ಬನೇ ಮಗ ಹೀಗೆ ಹೋಗಿಬಿಟ್ಟನಲ್ಲಾ, ಇನ್ನು ಯಾರಿಗಾಗಿ ಬದುಕುವುದು ಎಂದು ಸುಬ್ಬಮ್ಮ

